**ಪ್ರಧಾನ ಹಿರಿಯ ದಿವಾಣಿ ನ್ಯಾಯಧೀಶರು ಹಾಗೂ ಜೆ.ಎಂ.ಎಫ್.ಸಿ. ಇವರ ನ್ಯಾಯಾಲಯ, ಮುಧೋಳ**

**ಸಾಕ್ಷಿಗೆ ಇಂದು ದಿನಾಂಕ 22.01.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು : ಪ್ರತಿವಾದಿ 1 ರಿಂದ 4 ರವರ ಪರವಾಗಿ ಶ್ರೀ.ಕೆ.ವಿ.ಕೆ. ವಕೀಲರಿಂದ.**

ನಾನು ವಾದಿಗೆ ದೊಡ್ಡಪ್ಪನಾಗಬೇಕು. ಈದಾವೆಯ ಬಗ್ಗೆ ನನಗೆ ಮಾಹಿತಿ ಇರುವದು. ನನಗೆ ಮಾಹಿತಿ ಇದ್ದ ಬಗ್ಗೆ ಈ ದಾವೆಯಲ್ಲಿ ಸಾಕ್ಷಿ ನುಡಿಯುತ್ತಿರುವೇನು. ಲಕ್ಷಾನಟ್ಟಿಯನ ಸರ್ವೇ ನಂ. 63/2 ವಿಸ್ತಿರ್ಣ 3 ಎಕರೆ 18 ಗುಂಟೆ ಈ ಆಸ್ತಿಯು ವಾದಿಯ ಪೂರ್ವಜರ ಆಸ್ತಿ ಎಂದರೆ ಸರಿ. ಈ ಆಸ್ತಿಯಲ್ಲಿಯೂ ಸಹ ವಾದಿ ಪಾಲು ಕೇಳಿರುವಳು ಎಂದರೆ ಸರಿ. ಅದೇ ರೀತಿ ಲಕ್ಷಾನಟ್ಟಿ ಗ್ರಾಮದ ಸರ್ವೇ ನಂ. 63/5 25 ಗುಂಟೆಯ ಆಸ್ತಿಯಲ್ಲಿ ವಾದಿ ಪಾಲು ಕೇಳಿರುವಳು ಎಂದರೆ ಸರಿ. ಅದೇ ರೀತಿ ಸರ್ವೇ ನಂ. 63/6 ವಿಸ್ತಿರ್ಣ 2 ಎಕರೆ 03 ಗುಂಟೆ ಜಮೀನಿನಲ್ಲಿ ವಾದಿ ಪಾಲು ಕೇಳಿರುವಳು ಎಂದರೆ ಸರಿ. ಅದೇ ರೀತಿ ಸರ್ವೇ ನಂ. 63/7 ವಿಸ್ತಿರ್ಣ 2 ಎಕರೆ 10 ಗುಂಟೆ ಜಮೀನಿನಲ್ಲಿ ವಾದಿ ಪಾಲು ಕೇಳಿರುವಳು ಎಂದರೆ ಸರಿ. ವಾದಿಯರ ಪೂರ್ವಜರ ಬಗ್ಗೆ ನನಗೆ ಮಾಹಿತಿ ಇರುವದು. ವಾದಿಯ ಕುಟುಂಬದ ಮೂಲ ಪುರುಷ ದಂಡಪ್ಪ ಎಂದರೆ ಸರಿ. ಇವರಿಗೆ 3 ಜನ ಮಕ್ಕಳು ಅವರೆಂದರೆ ಸತ್ಯಪ್ಪ, ಮುದಿಯಪ್ಪ ಮತ್ತು ಕುಟ್ನವ್ವ ಅಂದರೆ ಸರಿ. ಸತ್ಯಪ್ಪ ಮೃತಪಟ್ಟಿರುವರು ಎಂದರೆ ಸರಿ.

ಸತ್ಯಪ್ಪನಿಗೆ ಲೋಕಣ್ಣ, ಪುಂಡಲೀಕ, ರಂಗಪ್ಪ, ಕಸ್ತೂರಿ ಮತ್ತು ಗೋವಿಂದಪ್ಪ ಎಂಬ ಮಕ್ಕಳು ಎಂದರೆ ಸರಿ. ಲೋಕಣ್ಣ ಮೃತಪಟ್ಟಿರುವರು ಎಂದರೆ ಸರಿ. ಈತನ ಹೆಂಡತಿ ಶಾಂತವ್ವ ಎಂದರೆ ಸರಿ. ಇವಳು ಲಕ್ಷಾನಟ್ಟಿಯಲ್ಲಿ ವಾಸವಾಗಿರುವಳು. ಇವರಿಗೆ ಸತ್ಯಪ್ಪ ಮತ್ತು ಸಿದ್ದಾರೂಢ ಎಂಬ ಹೆಸರಿನ 2 ಗಂಡು ಮಕ್ಕಳು ಇರುವರು ಎಂದರೆ ಸರಿ. ಪ್ರತಿವಾದಿ 1 ರವರಿಗೆ ಪ್ರೇಮಾ ಮತ್ತು ಸುಮಿತ್ರಾ ಎಂಬ ಇಬ್ಬರು ಹೆಣ್ಣು ಮಕ್ಕಳು ಇರುವರು ಎಂದರೆ ಸರಿ. ಪ್ರೇಮಾ ಇವಳು ವಾದಿಯ ತಾಯಿಯಾಗಿರುವಳು ಎಂದರೆ ಸರಿ. ಸುಮಿತ್ರಾಗೆ ರಾಕೇಶ ಮತ್ತು ಅಶ್ವಿನಿ ಎಂಬ ಮಕ್ಕಳು ಎಂದರೆ ಸರಿ. 2008 ರಲ್ಲಿ ಮುದಿಯಪ್ಪ, ಪುಂಡಲೀಕ, ರಂಗಪ್ಪ, ಗೋವಿಂದಪ್ಪ ಮತ್ತು ಶಾಂತವ್ವ ಇವರ ಮದ್ಯೆ ವಾಟ್ನಿಯಾಗಿರುವದು ಎಂದರೆ ಸರಿ. ಇವರು ಪ್ರತ್ಯೇಕವಾಗಿ ವಾಸಿಸುತ್ತಿರುವರು ಎಂದರೆ ಸರಿ. ಎಂ.ಆರ್. ನಂ.24/2008 ರಲ್ಲಿ ಹಕ್ಕು ಬದಲಾವಣೆ ಆಗಿರುವದು ಎಂದರೆ ಸರಿ. ಗೋವಿಂದಪ್ಪ ಇವರು ಸರ್ವೇ ನಂ.63/2 ಡಿ ಮತ್ತು 63/7 ಡಿ ಇವುಗಳನ್ನು ಲೋಕಣ್ಣ ನಾಗಪ್ಪ ತುಳಸೀಗೇರಿ

ಇವರಿಗೆ ಮಾರಾಟ ಮಾಡಿರುವರು ಎಂದರೆ ಸರಿ. ಈ ಆಸ್ತಿಗಳಲ್ಲಿಯಾ ಸಹ ವಾದಿ ಪಾಲು ಕೇಳಿದ್ದು ಹಾಗೂ ಈ ಆಸ್ತಿಯ ಖರೀದಿದಾರರನ್ನು ಪ್ರತಿವಾದಿಯನ್ನಾಗಿ ಮಾಡಿರುವಳು ಎಂದರೆ ಸರಿ.

ಅದೇ ರೀತಿ ಗೋವಿಂದಪ್ಪನನ್ನು ಪ್ರತಿವಾದಿಯನ್ನಾಗಿ ಮಾಡಿದ್ದು ಆತನ ವಿರುದ್ಧ ಪಾಲು ಕೇಳಿರುವಳು ಎಂದರೆ ಸರಿ. ವಾದಿ ಮನೆಯ ಆಸ್ತಿಗಳಲ್ಲಿಯೂ ಸಹ ಪಾಲುಕೇಳಿ ದಾವೆ ದಾಖಲು ಮಾಡಿರುವಳು. ಮನೆಯ ಆಸ್ತಿಯು ಕೋಳಿಗುಡ್ಡ ಗ್ರಾಮದಲ್ಲಿ ಇರುವದು. ಒಂದೇ ಮನೆಯ ಆಸ್ತಿ ಇರುವದು. ಈ ಮನೆ ರಂಗಪ್ಪನ ಹೆಸರಿನಲ್ಲಿ ಇರುವದು. ವಾದಿ ನ್ಯಾಯಾಲಯದಲ್ಲಿ ನುಡಿದಿರುವ ಸಾಕ್ಷ್ಯದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಕ್ಕೆ ವಾದಿ ರಾಧಾ ಮಾಹಿತಿ ನೀಡಿರುವಳು. ಪ್ರತಿವಾದಿ 1 ರಿಂದ 4 ರವರಿಗೆ ತೊಂದರೆ ನೀಡುವ ಸಲುವಾಗಿ ಸುಳ್ಳು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲು ಪ್ರತಿವಾದಿ 5 ಮತ್ತು ಅವರ ವಕೀಲರನ್ನು ಕೂಗಿಸಲಾಯಿತು. ನ್ಯಾಯಾಲಯದಲ್ಲಿ ಯಾರೂ ಹಾಜರಿರದ ಕಾರಣ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ**

ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ . ಹೇ. ಕೆ . ಸರಿ ಅದೆ .

ಸಾಕ್ಷಿಯ ಸಹಿ

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ